INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -3, September-October, 2021,
PageNo,35-44
Peer Reviewed Journal, Referred Journal

# ಮೈಸೂರು ಒಡೆಯರ ಕಾಲದ ಶೈಕ್ಷಣಿಕ ಕೇಂದ್ರಗಳ ಒಂದು ಚಿತ್ರಣ

ಡಾ. ಜಯರಾಮು.[1]

ಶಿಕ್ಷಣವೆಂಬುದು ಚರಿತ್ರೆಯಲ್ಲಿ ಯಾವುದೇ ನಾಡಿನ ಅಳಿವು-ಉಳಿವು ಪ್ರಗತಿ. ಆ ನಾಡಿನ ಹಿರಿಮೆ-ಗರಿಮೆ ಪ್ರಗತಿಯನ್ನು ಸಾಧಿಸುವಂತಹ ಪರಿಧಿಯಲ್ಲಿ ಶಿಕ್ಷಣವೆಂಬುದು ಹಿರಿದುದಾಗಿದೆ. ಈ ಶಿಕ್ಷಣವು-ಶಿಕ್ಷಣದ ಕ್ರಾಂತಿಯ ಮೂಲಕ ಗುರುತರವಾದ ಪಾರಮ್ಯವನ್ನು ಮೆರೆಯಬಹುದು. ಇಂತಹ ಶಿಕ್ಷಣ ಕ್ರಮವನ್ನು ನಮ್ಮ ಪ್ರಾಚೀನ ಭಾರತದ ಚರಿತ್ರೆಯಿಂದಲೂ ನಾವು ಕಾಣಬಹುದು. ಪ್ರಾಚೀನ ಭಾರತದಲ್ಲಿ ವೈಧಿಕ ಶಿಕ್ಷಣ, ಗುರುಕುಲ ಶಿಕ್ಷಣದ ಮುಖಾಂತರ ಒಂದಲ್ಲ ಒಂದು ರೀತಿಯಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸಿರುವುದನ್ನು ನಾವು ಕಾಣಬಹುದು. ಭಾರತ ದೇಶವು ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಯನ್ನು, ವಿಭಿನ್ನ ಶೈಲಿಯ ಶೈಕ್ಷಣಿಕ ನೆಲೆಯನ್ನು ಹೊಂದಿರುವಂಥದ್ದು ಎಂದು ಹೇಳಬಹುದು.

ಭಾರತೀಯ ವೈಭವದ ಚರಿತ್ರೆಯಲ್ಲಿ ಕರ್ನಾಟಕದ ಪಾತ್ರವೂ ಕೂಡ ಇದೆ. ಅದರಲ್ಲಿಯೂ ಮೈಸೂರು ಪ್ರಾಂತ್ಯವು ಹಲವು ಹತ್ತು ಖ್ಯಾತಿಯನ್ನು ಪಡೆದಿರುತ್ತದೆ. ಈ ಮೈಸೂರು ತನ್ನ ಒಡಲಲ್ಲಿ ಹಲವಾರು ಪರಂಪರೆಯನ್ನು ಹೊಂದಿರುವ ಶೈಕ್ಷಣಿಕ ಕೇಂದ್ರಗಳನ್ನು ಹೊಂದಿವೆ. ಅದಕ್ಕೆ ಮೂಲ ಕಾರಣಕರ್ತರು ಮೈಸೂರು ಸಂಸ್ಥಾನವನ್ನು ಆಳ್ವಿಕೆ ನಡೆಸಿದ ಯದುವಂಶದ ದೊರೆಗಳಾದ 'ಮೈಸೂರು ಒಡೆಯರು'. ಇವರು ತಮ್ಮ ತಮ್ಮ ಆಳ್ವಿಕೆಯ ಅವಧಿಯಲ್ಲಿ ಈ ನಾಡು ಪ್ರತಿಯೊಂದು ಕ್ಷೇತ್ರದಲ್ಲಿಯೂ ಅಭೂತಪೂರ್ವವಾದ ಪ್ರಗತಿಯನ್ನು ಸಾಧಿಸಬೇಕು ಮತ್ತು ಸಮಾಜದಲ್ಲಿನ ಎಲ್ಲಾ ವರ್ಗದವರಿಗೂ ಶಿಕ್ಷಣವನ್ನು ಕಲ್ಪಿಸಿಕೊಡಬೇಕು ಮತ್ತು ಸರ್ವಸಮಾನತೆಯನ್ನು ಉಂಟುಮಾಡಬೇಕು. ಈ ಸಾಧನೆಯನ್ನು ಮಾಡುವಂಥ ಹಾದಿಯಲ್ಲಿ ಹಲವು ಹತ್ತು ಶೈಕ್ಷಣಿಕ ಸಂಸ್ಥೆಗಳು ಮತ್ತು ಕೇಂದ್ರಗಳು ಸ್ಥಾಪನೆಯಾದವು. ಅದರಲ್ಲಿಯೂ ಮಹಿಳೆಯರಿಗೆ ಶಿಕ್ಷಣವನ್ನು ನೀಡುವಂಥ ಹಾದಿಯಲ್ಲಿ ಇಡೀ ದಕ್ಷಿಣ ಭಾರತದಲ್ಲಿಯೇ ಮೈಸೂರು ಸಂಸ್ಥಾನಕ್ಕೆ ಸರಿಸಮಾನವಾಗಿ ನಿಲ್ಲುವಂತಹ ಮತ್ತೊಂದು ಸಂಸ್ಥಾನವಿಲ್ಲವೆಂದರೆ ಅದು ಅತಿಶಯೋಕ್ತಿಯಾಗಲಾರದು. ಈ ಹಾದಿಯಲ್ಲಿ ವಾಣಿವಿಲಾಸ

---

1. **ಅತಿಥಿ ಉಪನ್ಯಾಸಕರು, ಇತಿಹಾಸ ವಿಭಾಗ ಶ್ರೀ ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹುಣಸೂರು.**

ಸನ್ನಿಧಾನದವರು ಕ್ರಿ.ಶ.1894 ರಿಂದ 1902 ರಿಜೆಂಟಾಗಿ ಆಳ್ವಿಕೆಯನ್ನು ನಡೆಸಿದಂತಹ ಸಮಯದಲ್ಲಿ ಶಿಕ್ಷಣಕ್ಕೆ ಮಹತ್ವದ ಸ್ಥಾನ ನೀಡಿದುದರ ಬಗ್ಗೆ ಎಂ.ಎ.ಆರ್. ವರದಿಯಲ್ಲಿ ಮಾಹಿತಿ ಸಿಗುತ್ತದೆ. ತದನಂತರದಲ್ಲಿ ಆಧುನಿಕ ಮೈಸೂರಿನ ಶಿಲ್ಪಿ ಮತ್ತು ಪಿತಾಮಹಾರಾದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಪ್ರಜೆಗಳ ಬಗ್ಗೆ ವಿಶೇಷವಾದ ಆಸಕ್ತಿ ಮಾನವೀಯತೆ, ಸ್ನೇಹಪರ, ಪ್ರಜಾಕಲ್ಯಾಣ, ಸಮಸಮಾಜದ ನಿರ್ಮಾಣವನ್ನು ಮಾಡುವ ಪ್ರತಿಯೊಬ್ಬರು ಮುಂದೆ ಬರಬೇಕು ಎಂಬ ತತ್ವದ ಅಡಿಯಲ್ಲಿ ಆಳ್ವಿಕೆ ನಡೆಸಿ ಶೈಕ್ಷಣಿಕ ಕ್ಷೇತ್ರಕ್ಕೆ ಭದ್ರಬುನಾದಿಯನ್ನು ಹಾಕಿದವರು.

**ಮಹಾರಾಣಿ ಕಾಲೇಜು ಸ್ಥಾಪನೆ:** ಮೈಸೂರಿನ ಚರಿತ್ರೆಯಲ್ಲಿಯೇ ಪ್ರಪ್ರಥಮ ಬಾರಿಗೆ ಮಹಿಳೆಯರಿಗೋಸ್ಕರ ಸ್ಥಾಪಿತವಾದ ಶಿಕ್ಷಣ ಸಂಸ್ಥೆ ಅಥವಾ ಕಾಲೇಜು ಎಂದರೆ ಮಹಾರಾಣಿ ಕಾಲೇಜು. ಸಮಾಜದಲ್ಲಿ ಪುರುಷರಂತೆಯೇ ಮಹಿಳೆಯರು ಕೂಡ ಸರ್ವಸಮಾನತೆಯನ್ನು ಸಾಧಿಸಬೇಕು ಎಂಬ ಮಹಾದಾಸೆಯಿಂದ ಹತ್ತನೇ ಮಹಾರಾಜ ಚಾಮರಾಜೇಂದ್ರ ಒಡೆಯರ್ ಅವರ ಧರ್ಮಪತ್ನಿಯಾವರಾದ ಕೆಂಪನಂಜಮ್ಮಣಿಯವರ ಸಹಾಯಾರ್ಥವಾಗಿ ಬಾಲಕಿಯರಿಗೆ ಮುಕ್ತ ಶಿಕ್ಷಣವನ್ನು ನೀಡುವ ದೃಷ್ಟಿಕೋನದಿಂದ ಅರಮನೆಯ ಬಕ್ಷಿಯಾದ ಅಮ್ಬಲ್ ನರಸಿಂಹ ಅಯ್ಯಂಗಾರ್, ಮೈಸೂರು ಖ್ಯಾತ ಪತ್ರಕರ್ತರಾದ ಎಂ.ವೆಂಕಟಕೃಷ್ಣಯ್ಯ ಮತ್ತು ನಾರಾಯಣಶಾಸ್ತ್ರಿಯಂಥ ಸಾಮಾಜಿಕ ಕಾರ್ಯಕರ್ತರ ಹೆಚ್ಚಿನ ಸಹಕಾರದಿಂದ ಕ್ರಿ.ಶ.1881ನೇ ಮಾರ್ಚ್ 16ರಂದು ಬಾಲಕಿಯರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯಾಗಿ 28 ಬಾಲಕಿಯರ ವಿದ್ಯಾಶಾಲೆಯಾಗಿ ಪ್ರಾರಂಭವಾಯಿತು. ಇದು ಪ್ರಸ್ತುತವಾಗಿ ಜಗನ್ಮೋಹನ ಅರಮನೆಯ ಹಿಂಬದಿಯ ಭಾಗದಲ್ಲಿ ಇದನ್ನು ನಾವು ಕಾಣಬಹುದು. ಯದುವಂಶಸ್ಥ ಚಾಮರಾಜ ಒಡೆಯರ್ ಮತ್ತು ರಾಣಿ ವಾಣಿವಿಲಾಸ ಸನ್ನಿಧಾನದವರ ಶ್ರಮದ ಫಲ. ಇದು ಬಾಲಕಿಯರಿಗೆ ಸೀಮಿತವಾದುದು, ಇದರ ಉಸ್ತುವಾರಿಯನ್ನು ಸೂಪರಿಂಟೆಂಡೆಂಟ್ ಮತ್ತು ಇಬ್ಬರು ಮುಖ್ಯ ಆಡಳತಗಾರರು ನಿರ್ವಹಣೆ ಮಾಡುತ್ತಿದ್ದರು. ಕ್ರಿ.ಶ.1891ರಲ್ಲಿ ಮೈಸೂರು ಸರ್ಕಾರವು ಈ ಶಾಲೆಯನ್ನು ಸ್ವಾಧೀನಪಡಿಸಿಕೊಂಡು ಪ್ರೌಢಶಿಕ್ಷಣ ತರಗತಿಗಳನ್ನು ಆರಂಭಿಸಿರುತ್ತದೆ. ಮೈಸೂರು ವಿಶ್ವವಿದ್ಯಾನಿಲಯವು 1916ರಲ್ಲಿ ಪ್ರಾರಂಭವಾದ ಮೇಲೆ ಅದರ ವ್ಯಾಪ್ತಿಗೆ ಒಳಪಟ್ಟ ಕಾಲೇಜಾಯಿತು ಹಾಗೂ ಸಂಪೂರ್ಣವಾಗಿ 1919ರಲ್ಲಿ ಕಾಲೇಜಿನ ಮೂಲ ತರಗತಿಗಳಾದ ಪ್ರಾಥಮಿಕ ಮತ್ತು ಮಾಧ್ಯಮಿಕ, ಪ್ರೌಢ ತರಗತಿಗಳಿಂದ ಬೇರ್ಪಡಿಸಲಾಯಿತು. ಪ್ರಸ್ತುತ ಪರಂಪರೆಯನ್ನು ಹೊಂದಿರುವ ಈ ಕಾಲೇಜಿನಲ್ಲಿ ಪ್ರಾಥಮಿಕ, ಹಿರಿಯ, ಪ್ರೌಢ, ಪದವಿ ಪೂರ್ವ, ಪ್ರಥಮ ದರ್ಜೆ, ಡಿ.ಇಡಿ., ಬಿ.ಇಡಿ. ಶಿಕ್ಷಣ ತರಗತಿಗಳ ಕಾಲೇಜಾಗಿ ಮೈಸೂರಿನ ಜನತೆಯ ಶಿಕ್ಷಣದ ದಾಹವನ್ನು ನೀಗಿಸುತ್ತಿರುವುದನ್ನು ಕಾಣಬಹುದು.

**ಪ್ರಾಚ್ಯವಿದ್ಯಾಲಯ ಮತ್ತು ಸಂಶೋಧನಾಲಯ:** ಮೈಸೂರಿನ ಅರಸರು ಪ್ರಾಚೀನ ಇತಿಹಾಸ, ಸಂಸ್ಕೃತಿ, ಪರಂಪರೆ, ಸಂಪ್ರದಾಯಗಳ ಸಂರಕ್ಷಣೆಗಳಿಗಾಗಿ ಅಪಾರವಾದ ಕಾಳಜಿಯನ್ನು ವಹಿಸಿದವರು.

ಇದರ ಪ್ರತಿಫಲವಾಗಿಯೇ ಕ್ರಿ.ಶ.1891ರಲ್ಲಿ ಮೈಸೂರಿನ ಒಡೆಯರಾಗಿದ್ದ ಚಾಮರಾಜ ಒಡೆಯರ್ ಅವರು **ಪ್ರಾಚ್ಯವಿದ್ಯಾಲಯ ಮತ್ತು ಸಂಶೋಧನಾಲಯ**ವನ್ನು ಸ್ಥಾಪಿಸಿದರು. ಇದನ್ನು ಮೊದಲಿಗೆ ಓರಿಯಂಟಲ್ ಲೈಬ್ರರಿ ಎಂದು ಕರೆಯಲಾಗುತ್ತಿತ್ತು. ಈ ಸಂಶೋಧನಾಲಯವೂ ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಾದಂಥ ಮಹಾರಾಜ ಮತ್ತು ಯುವರಾಜ ಕಾಲೇಜುಗಳ ಹಿಂಬದಿಯಲ್ಲಿದೆ. ಈ ಕಟ್ಟಡವು ಶಿಲ್ಪಕಲೆಯ ದೃಷ್ಟಿಯಿಂದ ಗ್ರಹಿಸಿದಾಗ ತುಂಬಾ ಆಕರ್ಷಕವಾಗಿದೆ. ಸುತ್ತಲು ಕಂಬಗಳು, ಪ್ರವೇಶದ ದ್ವಾರದಲ್ಲಿ ವಿಶೇಷತೆಯನ್ನು ಮೂಡಿಸುವ ಎರಡೆರಡು ಕಂಬಗಳು ಕಮಾನು ಆಕಾರದ ಕೆಲವು ಕಂಬಗಳು, ಪ್ರವೇಶದಲ್ಲಿ ಕಾಣಸಿಗುವ ಎರಡು ಸಿಂಹದ ಲಾಂಛನಗಳು, ಮೈಸೂರಿನ ಅಂಬಾರಿಯ ಚಿತ್ರ, ಒಟ್ಟು 26 ಕಂಬಗಳು ಹಾಗೂ ಮುಂದಿನ ಭಾಗದಲ್ಲಿ ಗರುಡಾಕೃತಿಯ ವಿನ್ಯಾಸವನ್ನು ಹೊಂದಿದ್ದಾಗಿದೆ. ಅಲ್ಲಿ ಲಭ್ಯವಿರುವ ಶಿಲಾನ್ಯಾಸದ ಪ್ರಕಾರ ಕ್ರಿ.ಶ. 1887ರಲ್ಲಿ ವಿಕ್ಟೋರಿಯಾಳ ನೆನಪಿನಾರ್ಥವಾಗಿ ಇದನ್ನು ನಿರ್ಮಿಸಲಾಗಿದೆ ಎಂಬುದು ಕಾಣಸಿಗುತ್ತದೆ. ಈ ಸಂಶೋಧನಾಯದ ಬಹುಮುಖ್ಯ ಉದ್ದೇಶವೆಂದರೆ; ಭಾರತೀಯ ಪರಂಪರೆಯನ್ನು ಬಿಂಬಿಸುವ ಸಾಹಿತ್ಯ ಹಾಗೂ ಸಂಸ್ಕೃತಿಗಳ ಪ್ರಾಚೀನ ಗ್ರಂಥಗಳನ್ನು ಪರಿಷ್ಕರಿಸುವುದು. ಅಂದರೆ ಶಿಕ್ಷಣಕ್ಕೆ ಸಂಬಂಧಪಟ್ಟಹಾಗೆ, ವೇದಗಳಿಂದ ಹಿಡಿದು ಪುರಾಣ, ಇತಿಹಾಸ ದರ್ಶನಗಳು, ಶಿಲ್ಪಶಾಸ್ತ್ರ, ವಾಸ್ತು, ಜ್ಯೋತಿಷ್ಯ, ಆಗಮ, ತಂತ್ರಾಂಶ, ವೈದ್ಯಕೀಯ, ಅರ್ಥಶಾಸ್ತ್ರ, ಪೂರ್ವದಲ್ಲಿನ ಪುಸ್ತಕಗಳ ಹಸ್ತ ಪ್ರತಿಗಳನ್ನು ಸಂಗ್ರಹಿಸಿಡಲಾಗಿದೆ. ಹಸ್ತ ಪ್ರತಿಗೆ ಸಂಬಂಧಪಟ್ಟಂತೆ ಇದರಲ್ಲಿ ಎರಡು ವಿಧವನ್ನು ಕಾಣಬಹುದು. ಅವುಗಳೆಂದರೆ; ಒಂದು ತಾಳೆಗರಿ ಪತ್ರ, ಮತ್ತೊಂದು ಕಾಗದದ ಪತ್ರವಾಗಿರುತ್ತದೆ.

ತಾಳೆಮರದಿಂದ ಸಂಸ್ಕರಿಸಿ ಎಲೆಯ ಮೇಲೆ ಚೂಪಾದ ಕಂಠದ ಮೇಲೆ ಕೊರೆದು ಬರೆದಂಥ ಹಸ್ತ ಪ್ರತಿಗಳು ಇಲ್ಲಿವೆ. ಈ ಸಂಶೋಧನಾ ವಿದ್ಯಾಲಯದಲ್ಲಿ ತಾಳೆಪತ್ರ ಮತ್ತು ಕಾಗದ ಪತ್ರಗಳು ಎರಡು ಸೇರಿ ಸುಮಾರು 75 ರಿಂದ 80 ಸಾವಿರ ಕೃತಿಗಳನ್ನು ಸಂಗ್ರಹಿಸಿಡಲಾಗಿದೆ. ಇವುಗಳಲ್ಲಿ 800 ವರ್ಷಗಳಷ್ಟು ಹಳೆಯವು ಇಲ್ಲಿ ಲಭ್ಯವಿದೆ. ಹಲವು ಹತ್ತಾರು ರೀತಿಯ ಲಿಪಿಗಳಿವೆ. ವಿಶೇಷವಾಗಿ ದಕ್ಷಿಣ ಭಾರತವು ಅವುಗಳಲ್ಲಿ ದೇವನಾಗರಿ ಮತ್ತು ನಂದಿನಾಗರಿ ಲಿಪಿಗಳು ಲಭ್ಯ. ಇದಲ್ಲದೇ ಟಿಗಳಾರಿಲಿಪಿ ಅಂದರೆ ತುಳು, ಕೊಂಕಣಿಗೆ ಸಂಬಂಧಪಟ್ಟದಾಗಿದೆ.

- ಈ ಸಂಸ್ಥೆಯು ಹಸ್ತಪ್ರತಿ ಸಂಗ್ರಹಣೆ ಮತ್ತು ಸಂರಕ್ಷಣೆ ಮಾಡುವುದು.
- ಸಂಶೋಧನೆ ಮಾಡಿ ಪ್ರಕಟಣೆ ಮಾಡುವುದು.
- ಸಂಶೋಧನಾಲಯದಲ್ಲಿ ಪ್ರಪ್ರಥಮ ಬಾರಿಗೆ 1909ರಲ್ಲಿ ಕೌಟಿಲ್ಯನ ಅರ್ಥಶಾಸ್ತ್ರ ಗ್ರಂಥವು ಪ್ರಕಟವಾಯಿತು. ಸುಮಾರು 200–210ರಷ್ಟು ಪುಸ್ತಕಗಳು ಪ್ರಕಟವಾಗಿವೆ.

- ತುಂಬಾ ಅಮೂಲ್ಯವಾದ ಎಲ್ಲಾ ವಿಷಯಗಳಿಗೂ ಸಂಬಂಧಪಟ್ಟ ವಿಷಯಗಳೂ ಅಲ್ಲದೆ ಮಹಾಭಾರತ, ಸೌಂದರ್ಯ ಲಹರಿ, ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರಿಗೆ ಸಂಬಂಧಿಸಿದ ಗ್ರಂಥಗಳು ಲಭ್ಯವಿದೆ.
- ಕ್ರಿ.ಶ.1891ರಲ್ಲಿ ಪ್ರಾರಂಭವಾದ ಸಮಯದಲ್ಲಿ ಕನ್ನಡ, ಪರ್ಶಿಯನ್, ಸಂಸ್ಕೃತ ಭಾಷೆಗೆ ಸಂಬಂಧಿಸಿದಂತೆ ಮಾಹಿತಿ ಕಲೆ ಹಾಕುತ್ತಿತ್ತು.
- ಇತ್ತೀಚೆಗೆ ಈ ಸಂಶೋಧನಾಲಯದಲ್ಲಿ ಸಂಸ್ಕೃತ ಭಾಷೆಗೆ ಸಂಬಂಧಪಟ್ಟ ಮಾಹಿತಿಯ ಬಗ್ಗೆ ಮಾತ್ರ ತನ್ನ ವ್ಯಾಪ್ತಿಯನ್ನು ಒಳಗೊಂಡಿದೆ.

**ಮಹಾರಾಜ ಸಂಸ್ಕೃತ ಪಾಠಶಾಲೆ:** ಮೈಸೂರಿನ ಅರಮನೆಯೊಂದಿಗೆ ಪರಂಪರೆ ಮತ್ತು ಸಂಸ್ಕೃತಿಯ ಅಂಶಗಳನ್ನು ಒಳಗೊಂಡಿರುವಂತಹ ಶಾಲೆಯಾಗಿದೆ. ಏಕೆಂದರೆ ಇದು ಅರಮನೆಯ ಕಾಡಾ ಕಛೇರಿಯ ಎಡಭಾಗದಲ್ಲಿ ಕಾಣಸಿಗುವಂತಹ ಕಟ್ಟಡವಾಗಿದೆ. ಇದು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಕನಸಿನ ಕೂಸಾಗಿದೆ. ಸ್ವತಃ ವಿದ್ವಾಂಸರಾಗಿದ್ದ ಮತ್ತು ಸಂಸ್ಕೃತ ಭಾಷೆಯ ಆಸಕ್ತರಾಗಿದ್ದ ಇವರು, ಇದರ ನಿರ್ಮಾಣ ಕಾರ್ಯಕ್ಕಾಗಿ ಒಂದು ಸಾವಿರ ರೂಪಾಯಿಯನ್ನು ದೇಣಿಗೆಯಾಗಿಯೂ ನೀಡಿದ್ದರು ಎಂಬುದು ತಿಳಿದುಬರುತ್ತದೆ. ಆದರೆ ರಾಜಕೀಯ ವಿಪ್ಲವದಿಂದ ಸಕಾರಗೊಳುವುದಿಲ್ಲ. ಬದಲಿಗೆ ಇದನ್ನು ಸಕಾರಗೊಳಿಸಿದ ಕೀರ್ತಿ ಮಹಾರಾಜ ಚಾಮರಾಜ ಒಡೆಯರು ಮತ್ತು ಆಗಿನ ದಿವಾನರಾಗಿದ್ದ ರಂಗಚಾರ್ಲು ಅವರ ಸಲಹೆಯ ಮೇರೆಗೆ ಈ ಸಂಸ್ಕೃತ ಪಾಠ ಶಾಲೆಯನ್ನು ಕ್ರಿ.ಶ.1868ರಲ್ಲಿ ಸ್ಥಾಪನೆ ಮಾಡುವ ಮುಖೇನ ಮೂರನೇ ಕೃಷ್ಣರಾಜ ಒಡೆಯರ್ ಅವರ ಕನಸನ್ನು ನನಸು ಮಾಡಲಾಯಿತು. ಈ ಭವ್ಯಕಟ್ಟಡವು ಆಧುನೀಕತೆಯ ವಿನ್ಯಾಸದೊಂದಿಗೆ ಪ್ರಾಚೀನ ಕಾಲದ ತೊಟ್ಟಿಯ ಸಂಪ್ರದಾಯಿಕವಾದ ಶೈಲಿಯನ್ನು ಒಳಗೊಂಡಿದೆ. ಇಲ್ಲಿ ನಮಗೆ 32 ಕಂಬಗಳು ಕಾಣಸಿಗುತ್ತವೆ ಮತ್ತು ವಿದ್ಯಾರ್ಥಿಗಳ ಕೊಠಡಿಗಳು ಮತ್ತು ಅವರು ಇಲ್ಲಿಯ ವಾಸ್ತವ್ಯವನ್ನು ಹೂಡುತ್ತಾರೆ. ಶಾಲೆಯಲ್ಲಿ ಪ್ರಮುಖ ವಿಷಯ ಸಂಸ್ಕೃತವಾಗಿದ್ದು, ವೇದಾಗಮ, ಯೋಗಾ, ಸಾಹಿತ್ಯ, ಶೈವಾ, ಜೈನಾಗಮ, ಕೃಷ್ಣಯಜುರ್ವೇದ, ವೈಖಾನಸಾಗಮ, ಪಾಂಚರಾತ್ರಗಮ, ಆಗಮವೇದ, ಸಾಮಾನ್ಯ ವಿಭಾಗದಲ್ಲಿ ಹಲವಾರು ವಿಭಾಗಗಳನ್ನು ಕಾಣಬಹುದು. ಅಲ್ಲದೆ ಇದು ಸಾಂಸ್ಕೃತಿಕ ಚಟುವಟಿಕೆಯ ಕಾರ್ಯಕ್ರಮಗಳಿಗೂ ಇಲ್ಲಿ ಕೆಲವು ವಿಶೇಷ ಸಮಯದಲ್ಲಿ ವೇದಿಕೆ ಸಜ್ಜಾಗುತ್ತದೆ. ಈ ಶಾಲೆಯನ್ನು ಪ್ರವೇಶಿಸಿದಾಗ, ಸದ್ಗುರು ಸೇವಾ ಮಂಡಲ ದೇವಸ್ಥಾನ, ಶ್ರೀ ದತ್ತಾತ್ರೇಯ ಮಂದಿರ, ಹಳೆಯ ಕಾಲದ ನೀರಿನ ಬಾವಿಯು ಕಾಲೇಜಿನ ಒಳಭಾಗದಲ್ಲಿ ಕಂಡುಬರುತ್ತದೆ.

**ಮೈಸೂರು ವಿಶ್ವವಿದ್ಯಾನಿಲಯ**: ಮೈಸೂರಿನಲ್ಲಿ ಕಂಡುಬರುವ ಮತ್ತೊಂದು ಪ್ರಮುಖವಾದ ಶೈಕ್ಷಣಿಕ ಸಂಸ್ಥೆಯೆಂದರೆ; ಮೈಸೂರು ವಿಶ್ವವಿದ್ಯಾನಿಲಯ. ಮೈಸೂರಿನ ಜನತೆಗೆ ಶಿಕ್ಷಣದಾಹವನ್ನು ನೀಗಿಸುತ್ತಿರುವಂತಹ, ಪರಂಪರೆಯನ್ನು ಬಿಂಬಿಸುವ ಮತ್ತು ಕರ್ನಾಟಕದ ಇತಿಹಾಸದಲ್ಲಿಯೇ

ಸ್ಥಾಪಿತವಾದ ಪ್ರಥಮ ಹಾಗೂ ಇಡೀ ಭಾರತದಲ್ಲಿಯೇ ಆರನೆಯ ವಿಶ್ವವಿದ್ಯಾನಿಲಯವಾಗಿ ಸ್ಥಾಪಿತವಾದ ಚರಿತ್ರೆಯನ್ನು ಹೊಂದಿದೆ. ಮೈಸೂರು ಸಂಸ್ಥಾನದ ಅಧಿಕಾರವನ್ನು ವಹಿಸಿಕೊಂಡ ಜನತೆಯ ಆರಾಧ್ಯ ದೈವರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಮಾನ್ಯತೆಯನ್ನು ನೀಡುವ ಮೂಲಕ **ಮೈಸೂರು ವಿಶ್ವವಿದ್ಯಾನಿಲಯ**ವನ್ನು 1916ನೇ ಜುಲೈ 27ರಂದು ಸ್ಥಾಪನೆಯನ್ನು ಮಾಡಿದರು. ಅಂದಿನ ಮೈಸೂರು ಸಂಸ್ಥಾನದಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜು ಮತ್ತು ಮೈಸೂರಿನ ಮಹಾರಾಜ ಕಾಲೇಜುಗಳು ಖ್ಯಾತಿಯನ್ನು ಪಡೆದಿದ್ದವು. ಇವು ಮದ್ರಾಸ್ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟಿದ್ದವು. ಅಂತಹ ಸಂದಿಗ್ದ ಪರಿಸ್ಥಿತಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಯಿತು. ಇದರ ಪ್ರಥಮ ಕುಲಪತಿಯಾಗಿ 'ಹೆಚ್.ವಿ.ನಂಜುಂಡಯ್ಯ' ಮತ್ತು 'ಥಾಮಸ್ ಡೆನ್‌ಹ್ಯಾಮ್' ಅವರು ಪ್ರಥಮ ಕುಲಸಚಿವರಾಗಿದ್ದರು. ಈ ಮೈಸೂರು ವಿಶ್ವವಿದ್ಯಾನಿಲಯವೂ ಮೊದಲಿಗೆ ಪ್ರಾರಂಭವಾದದ್ದು ಕಲೆ ಮತ್ತು ವಿಜ್ಞಾನಗಳು. ಮಹಾರಾಜ ಕಾಲೇಜು ಕಲೆಗೆ, ಬೆಂಗಳೂರಿನ ಸೆಂಟ್ರಲ್ ಕಾಲೇಜು ವಿಜ್ಞಾನಕ್ಕೆ ಸೀಮಿತವಾಗಿತ್ತು. ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಯಾದಾಗ ದಕ್ಷಿಣ ಕರ್ನಾಟಕದ ಜಿಲ್ಲೆಗಳಗೆಲ್ಲಾ ಈ ಒಂದು ವಿಶ್ವವಿದ್ಯಾನಿಲಯ ಮಾತ್ರ ಸೀಮಿತವಾಗಿತ್ತು. ಪ್ರಸ್ತುತ ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳು ಮಾತ್ರ ಸೇರಿವೆ. ಮೈಸೂರು ವಿಶ್ವವಿದ್ಯಾನಿಲಯವು ಕಲೆ, ವಿಜ್ಞಾನ, ಶಿಕ್ಷಣ, ಕಾನೂನು, ತಂತ್ರಜ್ಞಾನಗಳಲ್ಲಿ ಉನ್ನತ ಶಿಕ್ಷಣವನ್ನು ನೀಡುತ್ತಾ ಬಂದಿರುವುದನ್ನು ಗುರುತಿಸಬಹುದು. ಮೈಸೂರಿನ ವಿಶ್ವವಿದ್ಯಾನಿಲಯದ ಶೈಕ್ಷಣೀಕ ಗತವೈಭವದ ಪರಂಪರೆಯನ್ನು ಬಿಂಬಿಸುವ ಮಹಾರಾಜ ಮತ್ತು ಯುವರಾಜ, ವಿಶ್ವವಿದ್ಯಾನಿಲಯ ಸಂಜೆ ಕಾಲೇಜು ಮತ್ತು ಲಲಿತ ಕಲೆಗಳ ಕಾಲೇಜುಗಳನ್ನು ಕೂಡ ಒಳಗೊಂಡಿರುತ್ತದೆ.

**ಮೈಸೂರು ವಿಶ್ವವಿದ್ಯಾನಿಲಯದ ಲಾಂಛನ:** ಮೈಸೂರು ವಿಶ್ವವಿದ್ಯಾನಿಲಯವು ತನ್ನ ಲಾಂಛನವನ್ನಾಗಿ ಮೈಸೂರು ಸಂಸ್ಥಾನದ ಲಾಂಛನವನ್ನು ಆಯ್ಕೆ ಮಾಡಿಕೊಂಡಿದೆ. ಎರಡು ದೊಡ್ಡ ಆನೆಗಳ ಅಂದರೆ ಕಾಲ್ಪನಿಕ ಶರಭ, ಮಧ್ಯ ಗಂಡು ಭೇರುಂಡ ಪಕ್ಷಿಗಳಿವೆ. ಆನೆಗಳು ಸಿಂಹಕ್ಕಿಂತ ಬಲಶಾಲಿಗಳೆಂದು ಭಾವಿಸಲಾಗಿದೆ. ಅದರ ನೆತ್ತಿಯ ಮೇಲೆ ಸಿಂಹವಿದೆ, ಲಾಂಛನದ ಮೇಲ್ಭಾಗ "ನಹಿ ಜ್ಞಾನೇನ ಸದೃಶಂ" ಎಂದೂ ಕೆಳಭಾಗದಲ್ಲಿ ಸತ್ಯಮೇವ ಜಯತೆ ಎಂದೂ ಉಲ್ಲೇಖಿಸಲಾಗಿದೆ. ನಹಿ ಜ್ಞಾನೇನ ಸದೃಶ್ಯಂ ಎಂಬುದು ವಿಶ್ವವಿದ್ಯಾನಿಲಯದ ಧ್ಯೇಯ ವಾಕ್ಯ, ಜ್ಞಾನಕ್ಕೆ ಯಾವುದು ಸರಿಸಮವಾದುದಿಲ್ಲ, ಜ್ಞಾನ ಘನವಿದ್ಯೆ, ಅದಕ್ಕೆ ವಿವೇಕವೂ ಅಗತ್ಯ 'ಸತ್ಯಮೇವ ಜಯತೆ' ಎಂದರೆ ಸತ್ಯವೇ ಗೆಲುವು ಎಂದರ್ಥವಾಗುತ್ತದೆ.

**ಕ್ರಾಫರ್ಡ್ ಭವನ:** ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ಭವನವಾಗಿದೆ. ಈ ಭವ್ಯ ಭವನವನ್ನು 1947ರಲ್ಲಿ ನಿರ್ಮಾಣ ಮಾಡಲಾಗಿದೆ. ಅದು ಒಳಗೊಂಡಿರುವ ಕಲಾ ಶೈಲಿಗಳ

ಚಿತ್ರಣದಿಂದ ಯಾವುದೇ ವ್ಯಕ್ತಿಯ ಗಮನ ಸೆಳೆಯುತ್ತದೆ. ಅದರ ಮುಂದಿನ ಭಾಗದಲ್ಲಿ ಒಳಗೊಂಡಿರುವ ಬೃಹತ್ತಾದ 10 ಕಂಬಗಳು, ಈ ಕಂಬಗಳ ಎಡಬಲದಲ್ಲಿ ಆರ್ಚ್‌ನ ಆಕಾರದಲ್ಲಿರುವ 18 ಕಂಬಗಳು ತಟ್ಟನೆ ಕಾಣಸಿಗುತ್ತವೆ. ಇದು ಎರಡು ಅಂತಸ್ತಿನ ಕಟ್ಟಡವಾಗಿದೆ. ಭವನದ ವಾಸ್ತುಶಿಲ್ಪಿ ಹೆಚ್. ಕೊನಿಗ್ಸ್‌ಬರ್‌ಗರ್ ಅಂದಿನ ಸಮಯದಲ್ಲಿ ತಗುಲಿದ ವೆಚ್ಚ 12 ಲಕ್ಷ ರೂಪಯಿಗಳಾಗಿವೆ. ಕ್ರಾಫರ್ಡ್ ಮತ್ತು ಸಹೋದರ ಸಿ.ಎಸ್. ಕ್ರಾಫರ್ಡ್ ಮೈಸೂರಿನಲ್ಲಿ ವಾಸವಿದ್ದ ಸಮಯದಲ್ಲಿ 1 ಲಕ್ಷ ರೂಪಾಯಿಗಳನ್ನು ದೇಣಿಗೆಯಾಗಿ ನೀಡಿ ಶಿಕ್ಷಣಕ್ಕೆ ಪ್ರೋತ್ಸಾಹವನ್ನು ನೀಡಿದ್ದಾರೆ. ಈ ಭವ್ಯ ಭವನ 10000 ಸ್ಕ್ವೇರ್ ಮೀಟರನ್ನು ಒಳಗೊಂಡು ಹಲವಾರು ಪ್ರಮುಖ ಬಾಲ್ಕನಿಗಳು, ಕೊಠಡಿಗಳು ಕಾಣಸಿಗುತ್ತವೆ. ಇದರ ಚಿತ್ರಣ ಇಂದಿನ ಸ್ಥಿತಿಯಲ್ಲಿ ಭವನದ ಬಲಭಾಗದಲ್ಲಿ ಕುಲಪತಿಗಳ ಕಾರ್ಯಾಲಯ, ಇದರ ಹಿಂದಿನ ಭಾಗದಲ್ಲಿ ಪರೀಕ್ಷಾಂಗ ವಿಭಾಗ ಪಿಎಚ್.ಡಿ. ಭವನದ ಎಡಭಾಗಕ್ಕೆ ಪರೀಕ್ಷಾಂಗ ಕುಲಸಚಿವರ ಕಾರ್ಯಾಲಯ, ಇಲ್ಲಿಯೇ ಪರೀಕ್ಷಾಂಗ ವಿಭಾಗದ ಕಾರ್ಯಾಲಯವಿದೆ, ಮೊದಲ ಅಂತಸ್ತಿನಲ್ಲಿ ಆಡಳಿತ ವಿಭಾಗದ ಕುಲಸಚಿವರ ಕಾರ್ಯಾಲಯ ಮತ್ತು ವಿಶ್ವವಿದ್ಯಾನಿಲಯದಲ್ಲಿ ಅಲ್ಲಿನ ಕಾರ್ಯ ಚಟುವಟಿಕೆಗಳ ಬಗ್ಗೆ ನಡೆಯುವ ಸಿಂಡಿಕೇಟ್ ಸಭಾಂಗಣವಿದೆ.

**ಮಹಾರಾಜ ಕಾಲೇಜು:** ಮೈಸೂರಿನಲ್ಲಿ ಪರಂಪರೆಯ ಹಾದಿಯಲ್ಲಿ ಕಾಣಸಿಗುವ ಪ್ರಮುಖವಾದ ಕಾಲೇಜು ಎಂದರೆ ಮಹಾರಾಜ ಕಾಲೇಜು. ಈ ಕಾಲೇಜು ನನ್ನನ್ನು ಸೇರಿದಂತೆ ಲಕ್ಷಾಂತರ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮತ್ತು ಶಿಕ್ಷಣವನ್ನು ನೀಡಿದ ಜ್ಞಾನದೇಗುಲವಾಗಿದೆ. ಮೈಸೂರು ಸಂಸ್ಥಾನಕ್ಕೆ ಬ್ರಿಟನ್ ರಾಜ ಕ್ರಿ.ಶ. 1889ರ ನವೆಂಬರ್ 27ರಂದು ಬಂದಿದಂತಹ ಸಂದರ್ಭದಲ್ಲಿ ಈ ಕಟ್ಟಡಗಳಿಗೆ ಶಿಲಾನ್ಯಾಸ ಮಾಡಲಾಯಿತ್ತು ಎಂಬುದು ಕಂಡುಬರುತ್ತದೆ. ಇಂತಹ ಭವ್ಯ ಕಾಲೇಜು ಸುಂದರವಾದ ಕಲಾಶೈಲಿಯನ್ನು ಒಳಗೊಂಡಿದೆ. ಇದು ಶಂಕುವಿನಾಕಾರದ ಟೆರೆಸ್, ಸುಂದರವಾದ ಕಮಾನುಗಳಿಂದ ಕೂಡಿದ ಕಂಬಗಳು, ವಿಶಾಲವಾದ ಹಜಾರ, ಎರಡು ಅಂತಸ್ತಿನ ಈ ಕಟ್ಟಡವು ಬಹು ಅತ್ಯಾಕರ್ಷಕವಾಗಿದೆ. ನೆಲಅಂತಸ್ತಿನಲ್ಲಿ ಕಾಣಸಿಗುವ ಗಂಡುಬೇರುಂಡದ ಚಿತ್ರಣ, ಈ ಕಟ್ಟಡ ಬಲಭಾಗದಲ್ಲಿ ಗೋಪುರಾಕಾರದಲ್ಲಿರುವ ಮೇಲ್ಛಾವಣಿಗಳು ವಿಸ್ತಾರವಾದ ಕಿಟಕಿಗಳು, ಗೋಡೆಯಲ್ಲಿನ ಚಿತ್ರಣ, ಗೋಡೆಗೆ ಹಾಕಿರುವ ಬಣ್ಣದ ಚಿತ್ರಣವು ಚಕಿತಗೊಳಸುತ್ತದೆ. ನಾವು ಜ್ಞಾನ ದೇಗುಲದ ಒಳಗೆ ಪ್ರವೇಶಿಸಿದರೆ ನನ್ನಂತಹ ಹಲವಾರು ವಿದ್ಯಾರ್ಥಿಗಳಿಗೆ ನಾವು ಅರಮನೆಯಲ್ಲಿದ್ದೆವೋ ಎಂಬಂತಹ ಅನುಭವವಾಗುತ್ತದೆ. ಅಲ್ಲಿ ಬಂದು ವಿಶ್ರಮಿಸಿದರೆ ಅದರ ಮಹತ್ವ ಕಾಣಸಿಗುತ್ತದೆ. ಇಲ್ಲಿ ವಿಶಾಲವಾಗಿರುವಂತಹ ಸೀನಿಯರ್ ಬಿ.ಎ. ಹಾಲ್ ಮತ್ತು ಜೂನಿಯರ್ ಬಿ.ಎ. ಹಾಲ್‌ನಲ್ಲಿ ಏಕಕಾಲಕ್ಕೆ ಇನ್ನೂರು ವಿದ್ಯಾರ್ಥಿಗಳನ್ನು ಕೂರಿಸಿ ಪಾಠ ಪ್ರವಚನವನ್ನು ಮಾಡುವಂತಹ ವಿಶಾಲವಾದ ಕೊಠಡಿಗಳಿವೆ. ಹೊರಗಿನ ಭಾಗದಲ್ಲಿ ವಿಶಾಲವಾದ ವರಾಂಡ, ಇಲ್ಲಿ ವಿದ್ಯಾರ್ಥಿಗಳು ಕೂತು ಗುಂಪು ಚರ್ಚೆಯನ್ನು ಮಾಡುತ್ತಾರೆ. ಇದು ಹಲವಾರು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಈ

ವಿಶಾಲವಾದ ಜಾಗ ಕಾರಣೀಭೂತಿಯಾಗಿದೆ. ಪ್ರಸ್ತುತ ಈ ಕಾಲೇಜಿನಲ್ಲಿ 3396ಕ್ಕೂ ಮಿಗಿಲಾದ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. ಇದರ ಮೊದಲ ಪ್ರಾಂಶುಪಾಲರು ಡಾ. ಕೆ.ಸಿ.ರೆಡ್ಡಿ. ಪ್ರಸ್ತುತ ಪ್ರೊ.ಅನಿತ ವಿಮಲ ಬ್ರಾಕ್ಸ್ ಎಂಬುವರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಕಾಲೇಜಿನ ಹೊರಭಾಗದಲ್ಲಿ ಅಶೋಕ ಸ್ತಂಭವನ್ನು ನಿಲ್ಲಿಸಲಾಗಿದೆ. ಇದು ಶಾಂತಿಯ ದ್ಯೋತಕವಾಗಿ ಅಶೋಕ ಚಕ್ರವರ್ತಿಯ ನೆನಪನ್ನು ಮೂಡಿಸುವಂತಿದೆ. ಈ ಕಾಲೇಜಿನ ಕಟ್ಟಡ ರಚನೆಯನ್ನು ಎರಡನೇ ಬಾರಿಗೆ ಮೈಸೂರಿನ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಡಾ. ಬಜೇಂದ್ರಾಥ್‌ರವರು ಆಗಸ್ಟ್ 8, 1927ರಲ್ಲಿ ಶಿಲಾನ್ಯಾಸ ನೆರವೇರಿಸಿದರೆಂದು ತಿಳಿದು ಬರುತ್ತದೆ. ಈ ಕಾಲೇಜು ತನ್ನ ಚಟುವಟಿಕೆಯನ್ನು ಹಗಲಿನಲ್ಲೂ ಮತ್ತು ಸಂಜೆಯ ವೇಳೆಯಲ್ಲಿ ಎರಡು ಪಾಳಿಗಳಲ್ಲೂ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದೆ. ಅದಕ್ಕೆ ಮಹಾರಾಜ ಸಂಜೆ ಕಾಲೇಜು ಎಂದು ಕರೆಯಲಾಗುತ್ತದೆ.

**ಯುವರಾಜ ಕಾಲೇಜು:** ಮಹಾರಾಜ ಕಾಲೇಜಿನಂತೆಯೆ ಪರಂಪರೆಯ ಸೊಬಗನ್ನು ಬಿಂಬಿಸುವ ಕಾಲೇಜು ಎಂದರೆ ಯುವರಾಜ ಕಾಲೇಜು. ಮಹಾರಾಜ ಮತ್ತು ಯುವರಾಜ ಕಾಲೇಜುಗಳು ಅಕ್ಕಪಕ್ಕದಲ್ಲಿಯ ಅವಳಿ-ಜವಳಿ ಸಹೋದರರಿರುವಂತೆ ಕಾಣಸಿಗುತ್ತವೆ. ಈ ಭವ್ಯ ಕಟ್ಟಡಕ್ಕೂ ಮಹಾರಾಜ ಕಾಲೇಜಿಗೆ ಇರುವಷ್ಟೆಯೆ ಪರಂಪರೆಯಿದೆ. ಮಹಾರಾಜ ಕಾಲೇಜು ಕಲಾ ಮತ್ತು ವಾಣಿಜ್ಯ ವಿಷಯಕ್ಕೆ ಸಂಬಂಧಿಸಿದ್ದರೆ, ಯುವರಾಜ ಕಾಲೇಜು ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ್ದಾಗಿದೆ. ಈ ಭವ್ಯ ಕಟ್ಟಡದ ಮುಂದಿನ ಭಾಗದಲ್ಲಿ ಗರುಡವು ತನ್ನ ರೆಕ್ಕೆಗಳನ್ನು ಚಾಚಿ ತನ್ನ ಕತ್ತನ್ನು ಮುಂಚಾಚಿ ನಿಲ್ಲಿಸಿರುವಂತೆ ಭಾಸವಾಗುತ್ತದೆ. ಮುಂಭಾಗದಲ್ಲಿನ ನಾಲ್ಕು ಕಂಬಗಳು ಅದರಲ್ಲಿ ವಿಶೇಷವಾಗಿ ಎರಡು ಕಂಬಗಳು ವಿಶೇಷತೆಯನ್ನು ಮೂಡಿಸುವಂತಹವು. ಈ ಕಟ್ಟಡವು ಸಹ ಎರಡು ಅಂತಸ್ತಿನ ಕಟ್ಟಡವಾಗಿದೆ. ನೆಲಅಂತಸ್ತು ಮತ್ತು ಕೆಳಭಾಗದಲ್ಲಿ ಕಾಣಸಿಗುವ ಕಮಾನುಗಳು ಈ ಕಾಲೇಜಿಗೆ ಮೆರುಗನ್ನು ನೀಡುತ್ತವೆ. ಅಲ್ಲದೆ ಗಾಳಿ, ಬೆಳಕು ಕಟ್ಟಡಕ್ಕೆ ಸಲೀಸಾಗಿ ಬರುವಂತೆ ಮಾಡಲು ಹಲವಾರು ಕಿಟಕಿಗಳು ಮತ್ತು ರಂಧ್ರಗಳನ್ನು ಒಳಗೊಂಡಿದೆ. ಇದರ ಪ್ರಥಮ ಪ್ರಾಂಶುಪಾಲರಾಗಿ ಎಸ್.ವಿ.ಕೃಷ್ಣಸ್ವಾಮಿ ಐಯ್ಯಂಗಾರ್‌ರವರು (1928-1932) ಮತ್ತು ಪ್ರಸ್ತುತ ಪ್ರಾಂಶುಪಾಲರಾಗಿ ಪ್ರೊ.ಬಿ.ಎನ್.ಯಶೋಧಾ ಅವರು ಕಾರ್ಯನಿರ್ವಹಿಸುತ್ತಿದ್ದಾರೆ. ಯುವರಾಜ ಕಾಲೇಜು ಮೈಸೂರು ವಿಜ್ಞಾನ ಕ್ಷೇತ್ರದಲ್ಲಿ ಪರಿಣತಿಯನ್ನು ಸ್ಥಾಪಿಸಲು ಕಾರಣೀಭೂತವಾಗಿದೆ.

**ಮಹಾರಾಣಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು:** ಕರ್ನಾಟಕದ ರಾಜ್ಯದಲ್ಲಿಯೇ ದಾಖಲೆಯ ಸಂಖ್ಯೆಯ ವಿದ್ಯಾರ್ಥಿನಿಯರನ್ನು ಹೊಂದಿರುವ ಇಂದಿನ ಜಾನ್ಸಿ ರಾಣಿ ಲಕ್ಷ್ಮೀಭಾಯಿ ರಸ್ತೆಯಲ್ಲಿ ಕಾಣಸಿಗುವ ಈ ಕಾಲೇಜು ಮೈಸೂರಿನ ಅತಿ ಹಳೆಯ ಕಾಲೇಜು ಮತ್ತು ಪರಂಪರೆಯನ್ನು ಬಿಂಬಿಸುವಂತದು. ಈ ಕಾಲೇಜಿನ ಹುಟ್ಟು ಮತ್ತು ಬೆಳವಣಿಗೆ ರೋಚಕವಾಗಿರುವಂತದು. ಕ್ರಿ.ಶ 1917ರಲ್ಲಿ ಮಹಾರಾಣಿ ಕೆಂಪರಾಜಮ್ಮಣಿ ಅವರು ಮೈಸೂರು ಸಂಸ್ಥಾನದ ಬಡ ಮಕ್ಕಳಿಗೆ ಅದರಲ್ಲಿಯೂ

ವಿಶೇಷವಾಗಿ ಮಹಿಳೆಯರಿಗೆ ಶಿಕ್ಷಣವನ್ನು ನೀಡಲಿಕ್ಕೆ ಪ್ರಾರಂಭವಾದ ಕಾಲೇಜು, ಅದು ಮಹಾರಾಣಿ ಕಾಲೇಜು ಎಂದು ಪ್ರಸಿದ್ಧಿಯಾಯಿತು. ಈ ಕಾಲೇಜಿನ ಏಳಿಗೆಗೆ, ಅಭ್ಯುದಯಕ್ಕೆ ಶ್ರಮಿಸಿದವರೆಂದರೆ ದರ್ಬಾರ್ ಭಕ್ಷಿ ಅಂಬಳೆ ನರಸಿಂಹ ಅಯ್ಯಂಗಾರ ಹಾಗೂ ಎಂ. ವೆಂಕಟಕೃಷ್ಣಯ್ಯನವರು (ತಾತಯ್ಯ) 97 ವರ್ಷಗಳ ಕಾಲ ಯಶಸ್ವಿಯಾಗಿ ನಡೆದುಕೊಂಡು ಬಂದಿದೆ, ಇಂತಹ ಕಾಲೇಜು ತನ್ನ ಪೂರ್ವದ ಇತಿಹಾಸವನ್ನು ಹೊಂದಿದೆ. ಏಕೆಂದರೆ ಇದು ಕ್ರಿ. ಶ. 1881ರಲ್ಲಿಯೇ ಮಹಾರಾಣಿ ವಾಣಿವಿಲಾಸ ಸನ್ನಿಧಾನ ಎಂಬ ಹೆಸರಿನಿಂದ ಒಂದು ಶಾಲೆಯಾಗಿ ಪ್ರಾರಂಭವಾದುದನ್ನು ನಾವು ನೋಡಬಹುದು, ಯಾವಾಗ ಮೈಸೂರು ವಿಶ್ವವಿದ್ಯಾನಿಲಯ ಮತ್ತು ಮಹಿಳೆಯರಿಗೆ ಪದವಿ ಶಿಕ್ಷಣವನ್ನು ನೀಡಲು ಪರ್ಯಾಯವಾಗಿ ಮಾಡಲು ಪ್ರಯತ್ನಿಸಿದಾಗ ಪ್ರಸ್ತುತದಲ್ಲಿರುವ ಸ್ಥಳಕ್ಕೆ ವರ್ಗಾಯಿಸಲಾಯಿತು. ಈ ಭವ್ಯ ಕಾಲೇಜು ಯೂರೋಪಿನ ಶೈಲಿಯಾದ ಕ್ಲಾಸಿಕಲ್ ಪಂಥದ ಲಕ್ಷಣವನ್ನು ಹೊಂದಿದ್ದು, ಗ್ರೀಕ್ ರೋಮನ್ ಶೈಲಿಯ ಕಟ್ಟಡವಾಗಿದೆ, ಏಕೆಂದರೆ ವಿಶಾಲವಾದ ಕಮಾನುಗಳನ್ನು ಹೊಂದಿರುವ ಕಂಬಗಳು, ಎರಡು ಅಂತಸ್ತಿನ ವಿಸ್ತಾರವಾದ ಕಟ್ಟಡ, ಮೇಲಂತಸ್ತಿನ ಕೊನೆಯಲ್ಲಿ ಸಣ್ಣ ಸಣ್ಣ ಗುಂಬಜ್‌ಗಳನ್ನು ಅಳವಡಿಸಲಾಗಿದ್ದು, ಇದೊಂದು ಸುಂದರವಾದ ಕಟ್ಟಡವಾದುದ್ದಾಗಿದೆ. ಇಂತಹ ಕಾಲೇಜಿನ ಮುಖ್ಯ ಉದ್ದೇಶ, ಗ್ರಾಮೀಣ, ಹಿಂದುಳಿದ, ಪರಿಶಿಷ್ಟ ವರ್ಗದ ಹೆಣ್ಣು ಮಕ್ಕಳಿಗೆ ವಿದ್ಯಾದಾನ ಮಾಡುವುದಾಗಿದೆ. ಪ್ರಾರಂಭಿಕ ವರ್ಷದಲ್ಲಿ ಕೇವಲ ಹದಿನೇಳು ವಿದ್ಯಾರ್ಥಿನಿಯರೊಂದಿಗೆ ಆರಂಭವಾಗಿದ್ದ ಕಾಲೇಜು ಈಗಲೂ ಸಂಖ್ಯೆಯಲ್ಲಿ ಎಲ್ಲ ಕಾಲೇಜುಗಳನ್ನು ಹಿಂದಿಕ್ಕಿದೆ. ಮೊದಲು ಪಾರಂಪರಿಕ ಕಟ್ಟಡದಲ್ಲಿ ಕಾಲೇಜು ಪ್ರಾರಂಭವಾಯಿತು. ಕಲಾ ಹಾಗೂ ವಿಜ್ಞಾನ ವಿಭಾಗಗಳು 1979ರಲ್ಲಿ ಪ್ರತ್ಯೇಕಗೊಂಡು, ಕಲಾವಿಭಾಗ ಪಕ್ಕದ ಹೊಸ ಕಟ್ಟಡಕ್ಕೆ ಸ್ಥಳಾಂತರಗೊಂಡಿತು. 1983ರಲ್ಲಿ ವಾಣಿಜ್ಯ ನಿರ್ವಹಣಾಶಾಸ್ತ್ರ ಪ್ರಾರಂಭವಾಗಿ, 2007ರಲ್ಲಿ ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು ಎಂದು ಸರ್ಕಾರ ಮರು ನಾಮಕರಣ ಮಾಡಿತು. ಇಲ್ಲಿರುವ ವಿದ್ಯಾರ್ಥಿನಿಯರು ಅಭೂತಪೂರ್ವವಾದ ಪ್ರಗತಿಯನ್ನು ಸಾಧಿಸುತ್ತಿದ್ದಾರೆ.

**ಮಹಾರಾಜ ಪದವಿ ಪೂರ್ವ ಕಾಲೇಜು:** ಮೈಸೂರಿನಲ್ಲಿ ಕಾಣಸಿಗುವ ಅತಿ ಹಳೆಯ ಕಾಲೇಜುಗಳಲ್ಲಿ ಮಹಾರಾಜ ಪದವಿಪೂರ್ವ ಕಾಲೇಜು ಸಹ ಒಂದು. ಇಂತಹ ಕಾಲೇಜು ಒಂದು ಕಡೆ ಮಹಾರಾಣಿ ಕಾಲೇಜು ತನ್ನ ಎದುರಿಗೆ ಮತ್ತೊಂದು ಕಡೆಯಲ್ಲಿ ರಾಜರ ಕಾಲದ ಅಠಾರ ಕಛೇರಿ ಅಥವಾ ಇಂದಿನ ಜಿಲ್ಲಾಧಿಕಾರಿಗಳ ಕೇಂದ್ರ ಕಛೇರಿ ಮತ್ತು ಜನಸಂದಣಿಯಾದ ಝಾನ್ಸಿರಾಣಿ ಲಕ್ಷ್ಮೀಭಾಯಿ ರಸ್ತೆಯನ್ನು ಒಳಗೊಂಡು ಮೈಸೂರಿನ ಹೃದಯ ಭಾಗದಲ್ಲಿ ಸ್ಥಾಪಿತವಾದುದಾಗಿದೆ. ಈ ಒಂದು ಭವ್ಯ ಕಾಲೇಜು ಪ್ರಾರಂಭವಾದುದು ಮೈಸೂರಿನ ದೊರೆ ಮುಮ್ಮಡಿ ಕೃಷ್ಣರಾಜ ಒಡೆಯರುರವರು ಕ್ರಿ.ಶ.1833ರಲ್ಲಿ ಮಹಾರಾಜ ಪ್ರೌಢಶಾಲೆಯನ್ನು ಸ್ಥಾಪಿಸಿದರು ಮತ್ತು 'ರಾಜಾಸ್ ಫ್ರಿಸ್ಕೂಲ್' ಎಂದು ಕರೆಯಲಾಗುತ್ತಿದ್ದ ಈ ಶಾಲೆಯನ್ನು ಪ್ರಾರಂಭದ ದಿನಗಳಲ್ಲಿ ಪ್ರೈಮರಿ ತರಗತಿಗಳನ್ನು ಮಾತ್ರ ನಡೆಸಲಾಗುತ್ತಿತ್ತು. ಕ್ರಿ.ಶ.

1863ನೇ ಇಸವಿಯಲ್ಲಿ ಪ್ರೌಢಶಾಲೆಯ ದರ್ಜೆಗೆ ಏರಿಸಲಾಯಿತು. ನಂತರದ ಅವಧಿಯಲ್ಲಿ ಅಂದರೆ ಕ್ರಿ.ಶ. 1879ರಲ್ಲಿ ಕಾಲೇಜು ತರಗತಿಗಳನ್ನು ಪ್ರಾರಂಭಿಸಲಾಯಿತು. ಶಾಲೆಯು ಪ್ರಾಥಮಿಕ ಹಂತದಲ್ಲಿ ನಜರ್‌ಬಾದ್‌ನಲ್ಲಿ ಕಾರ್ಯ ನಿರ್ವಹಿಸಿ, ಕ್ರಿ.ಶ.1893ರಲ್ಲಿ ಈಗಿನ ಮಹಾರಾಜ ಕಾಲೇಜಿನ ಭವ್ಯ ಕಟ್ಟಡಕ್ಕೆ ಶಾಲೆ ಮತ್ತು ಕಾಲೇಜನ್ನು ಸ್ಥಳಾಂತರಿಸಲಾಯಿತು. ಈ ಶಾಲೆಯಲ್ಲಿನ ವಿಶೇಷತೆಯೆಂದರೆ, ಕ್ರಿ.ಶ. 1916ರವರೆಗೆ ಬ್ರಿಟಿಷ್ ಮುಖ್ಯೋಪಾಧ್ಯಯರುಗಳೆ ಶಾಲೆಯ ಆಡಳಿತ ನಡೆಸುತ್ತಿದ್ದರು. ಮೈಸೂರು ವಿಶ್ವವಿದ್ಯಾನಿಲಯ ಪ್ರಾರಂಭವಾದ ಮೇಲೆ ಕ್ರಿ.ಶ. 1916ರಲ್ಲಿ ಇಂಟರ್ ಮೀಡಿಯೇಟ್‌ವರೆಗಿನ ತರಗತಿಗಳನ್ನು ವಿಭಜಿಸಿ ತಾತ್ಕಾಲಿಕವಾಗಿ ತರಗತಿಗಳನ್ನು ಜಗನ್ಮೋಹನ ಅರಮನೆಯಲ್ಲಿ ನಡೆಸಲಾಗುತ್ತಿತ್ತು. ನಂತರ 1921ರಲ್ಲಿ ಈಗಿರುವ ಭವ್ಯ ಕಟ್ಟಡದಲ್ಲಿ ಕಾರ್ಯನಿರ್ವಹಿಸಲಾರಂಭಿಸಿತ್ತು. ಇಂತಹ ಭವ್ಯ ಪರಂಪರೆಯನ್ನು ಬಿಂಬಿಸುವ ಈ ಕಾಲೇಜು ಸುಂದರವಾದ ಕಲಾ ಶೈಲಿಗಳಿಂದ ನಿರ್ಮಿತವಾಗಿದೆ. ಇದರಲ್ಲಿನ ವಿಸ್ತಾರವಾದ ಮತ್ತು ಸುಂದರವಾದ ಕಲಾ ಶೈಲಿಗಳಿಂದ ಕೂಡಿದ್ದು, ಎರಡು ಅಂತಸ್ತಿನ ಕಟ್ಟಡವಾಗಿದೆ. ಅಯೋನಿಕ್ ಶೈಲಿ ಮತ್ತು ಅಯನ್ ಶೈಲಿಯ ದುಂಡಾದ ಕಂಬಗಳ ದೃಶ್ಯಗಳನ್ನು ಮತ್ತು ವಿಶಾಲವಾದ ವರಾಂಡವನ್ನು ನಾವು ಮೊದಲ ಅಂತಸ್ತಿನಲ್ಲಿ ನೋಡಬಹುದು. ಎರಡನೆಯ ಅಂತಸ್ತಿನಲ್ಲಿ ಅಷ್ಟಭುಜಾಕೃತಿಯ ಮತ್ತು ಪಿರಮಿಡ್‌ನಾಕೃತಿಯ ಶಿಖರವನ್ನು ಕಾಣಬಹುದು. ಇವುಗಳು ಯಾವುದೇ ಒಬ್ಬ ಕಲಾರಸಿಕನ ಮನಸ್ಸನ್ನು ತಲ್ಲಣಗೊಳಿಸುವಂತೆ ಮಾಡುತ್ತವೆ. ಈ ಶಿಖರಗಳು ಕಟ್ಟಡದ ನಾಲ್ಕು ಬದಿಯಲ್ಲಿರುವುದು ಸಹ ಇದರ ವಿಶೇಷತೆಯಾಗಿದೆ. ಕಿಟಕಿಗಳು, ರಂಧ್ರಗಳು, ದುಂಡಾದ ಕಂಬಗಳು ಈ ಭವ್ಯ ಕಾಲೇಜನ್ನು ತನ್ನ ಒಡಲಲ್ಲಿಟ್ಟುಕೊಂಡಿದೆ. ಇಂತಹ ಕಾಲೇಜು ಪ್ರಸ್ತುತ ಇನ್ನೂರನೆಯ ವರ್ಷಕ್ಕೆ ಕಾಲಿಡಲು ಹಾತೊರೆಯುತ್ತನಿಂತಿದೆ. ಇಂತಹ ಜ್ಞಾನ ದೇಗುಲ ವೃತ್ತಿ ಶಿಕ್ಷಣ, ಕಲಾ, ವಾಣಿಜ್ಯ ಹಾಗೂ ವಿಜ್ಞಾನ ವಿಭಾಗಗಳನ್ನು ಒಳಗೊಂಡು ಲಕ್ಷಾಂತರ ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆ ನೀಡಿ ಇಡೀ ರಾಜ್ಯದಲ್ಲೇ ಪ್ರತಿಷ್ಠಿತ ಕಾಲೇಜು ಎಂಬ ಹೆಗ್ಗಳಿಕೆ ಹೊಂದಿದೆ. ಸುಸಜ್ಜಿತ ಪ್ರಯೋಗಾಲಯ, ಗ್ರಂಥಾಲಯ, ಶೌಚಾಲಯ, ವಿಶಾಲವಾದ ಆಟದ ಮೈದಾನ ಎಲೆಕ್ಟ್ರಾನಿಕ್ ಮತ್ತು ಕಂಪ್ಯೂಟರ್‌ನ ಆಧುನಿಕ ಪ್ರಯೋಗಗಳು ಪ್ರಸ್ತುತ ಸಂದರ್ಭದಲ್ಲಿದೆ, ವಿಶೇಷವಾಗಿ ಇಲ್ಲಿ ಗ್ರಾಮಾಂತರ ಪ್ರದೇಶದಿಂದ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳಿಂದ ಬರುವವರಾಗಿದ್ದು ಅವರೆಲ್ಲರಿಗೂ ಜ್ಞಾನಾರ್ಜನೆಯನ್ನು ನೀಡುವಂತಹ ಹೆಮ್ಮೆಯ ಕಾಲೇಜಾಗಿದೆ.

ಇಂಥ ಅಭೂತಪೂರ್ವವಾದ ಕೊಡುಗೆಗಳನ್ನು ಮೈಸೂರಿನ ದೊರೆಗಳು ತಮ್ಮ ಕಾಲಾವಧಿಯಲ್ಲಿ ಮೈಸೂರು ಸಂಸ್ಥಾನಕ್ಕೆ ತಮ್ಮ ಪ್ರಜೆಗಳ ಹಿತಾಸಕ್ತಿಗೋಸ್ಕರ ಮತ್ತು ಏಳಿಗೆಗಾಗಿ ಹಗಲಿರುಳು ಸೇವೆ ಸಲ್ಲಿಸುದುದರ ಫಲವಾಗಿ ಮೈಸೂರು ಅಂತರರಾಷ್ಟ್ರೀಯ ಮಟ್ಟದಲ್ಲಿ ತನ್ನದೇ ಆದ ಹಿರಿಮೆ ಮತ್ತು ಗರಿಮೆಯನ್ನು ಸಾಧಿಸಲು ಮೈಸೂರು ಒಡೆಯರು ಕಾರಣರಾಗಿದ್ದಾರೆ. ಮತ್ತೇ ಮೈಸೂರು ಸಂಸ್ಥಾನವನ್ನು ಆಡಳಿತ ಮಾಡಿದ ಮಹಾರಾಜುರುಗಳು ಮೈಸೂರು ರಾಜ್ಯವನ್ನು ಮಾದರಿ ರಾಜ್ಯವನ್ನು

ಮಾಡಿದವರು. ಅದರ ಜೊತೆಗೆಯೇ ಈ ಪ್ರಾಂತ್ಯದಲ್ಲಿನ ಪ್ರತಿಯೊಬ್ಬರು ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆವಿಗೂ ಕಲಿಯಲು ಅವಕಾಶವನ್ನು ಸನ್ನಿಧಾನದ ಮೂಲಕವೇ ಕಲ್ಪಿಸಿಕೊಟ್ಟಿರುವುದು ಒಂದು ಚರಿತ್ರೆಯೇ ಆಗಿರುತ್ತದೆ. ಮೈಸೂರು ಒಡೆಯರು ದೇಶ ವಿದೇಶಗಳ ರಾಜ ಮಹಾರಾಜರುಗಳಿಗೆ ಮಾದರಿಯಾಗಿದ್ದಾರೆ ಎಂಬುದು ತಿಳಿದು ಬಂದಿರುತ್ತದೆ.

**ಪರಾಮರ್ಶನ ಗ್ರಂಥಗಳು**


1. ರಾಜೇಂದ್ರ ಡಿ.ಕೆ.ಗುರುಸ್ವಾಮಿ, ಭಾನುಮತಿ ವೈ.ಸಿ. (ಸಂ):**ಮೈಸೂರು ದರ್ಶನ,**(ಸಂ–4), ಪ್ರಸಾರಾಂಗ, ಕ.ರಾ.ಮು.ವಿ., ಮಾನಸಗಂಗೋತ್ರಿ, ಮೈಸೂರು–2012
2. ಸಾಹಿತ್ಯ ಚಿಂತನ: ವಾರ್ಷಿಕ ಸಂಚಿಕೆ, 2009–10
3. ನಂಜರಾಜ ಅರಸು ಪಿ.ವಿ: **ಮೈಸೂರು ನೂರಿನ್ನೂರು ವರ್ಷಗಳ ಹಿಂದೆ,** ಅಭಿರುಚಿ ಪ್ರಕಾಶನ, ಮೈಸೂರು–2007
4. ಗಜಾನನ ಶರ್ಮ: **ಮೈಸೂರು ವಿಶ್ವವಿದ್ಯಾನಿಲಯದ ರೂವಾರಿ ಸರ್ ಎಂ.ವಿಶ್ವೇಶ್ವರಯ್ಯ,** ಅಂಕಿತ ಪುಸ್ತಕ ಪ್ರಕಾಶನಾಲಯ, ಬೆಂಗಳೂರು–2013
5. Constance E Parson: Mysore City, Humphrey Milford, Oxford University Press, London-1930
6. ISSAR. T. P: Royal City, I.T.C. Ltd., Vikrant Tyres Ltd., Mysore - 1991
7. ಪ್ರಜಾವಾಣಿ ಪತ್ರಿಕೆ - 11.2.2014